ಕರ್ನಾಟಕ ಸರ್ಕಾರ

ಕಡತ ಸಂಖ್ಯೆ:, ಪಮೂಶಿ/ಶೈ.ಶಾ-06/ಹೆ.ವಿ.ಅನು/2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, ಮಲ್ಲೇಶ್ವರಂ 18ನೇ ಕ್ರಾಸ್,
ಬೆಂಗಳೂರು-12, ದಿನಾಂಕ 22-07-2016.

## ಜ್ಞಾಪನ

ವಿಷಯ: 2016-17ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ತರಗತಿಗಳಿಗೆ ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಜಿಲ್ಲಾ ಉಪ ನಿರ್ದೇಶಕರು ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಂದ ಬಂದಿರುವ ಮನವಿಗಳು
2. ಸರ್ಕಾರದ ಪತ್ರ ಸಂಖ್ಯೆ ಇಡಿ 407 ಎಸ್‌ಹೆಚ್‌ಹೆಚ್ 2016 ದಿನಾಂಕ 23-06-2016

*******

ಈ ಕೆಳಕಂಡ ಪದವಿ ಪೂರ್ವ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ದಾಖಲಾತಿಯಲ್ಲಿ ಪ್ರತಿ ವಿಭಾಗದಲ್ಲಿ ಗರಿಷ್ಠ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಆದರೆ 2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷಾ ಪಲಿತಾಂಶವು ಹೆಚ್ಚಾಗಿದ್ದು, ಪ್ರಥಮ ಪಿಯುಸಿ ದಾಖಲಾತಿಗಾಗಿ ವಿದ್ಯಾರ್ಥಿಗಳಿಂದ ಮತ್ತು ಪೋಷಕರಿಂದ ಒತ್ತಡ/ಬೇಡಿಕೆ ಉಂಟಾಗುತ್ತಿರುವುದಾಗಿ ಉಲ್ಲೇಖಿತ ಪತ್ರಗಳಲ್ಲಿ ತಿಳಿಸಿರುತ್ತಾರೆ. ಸದರಿ ಕೋರಿಕೆಗಳನ್ನು ಪರಿಶೀಲಿಸಲಾಯಿತು.

2016ರ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶದ ಶೇಕಡಾ ಪ್ರಮಾಣವು ಹೆಚ್ಚಾಗಿರುವುದರಿಂದ, ಸಹಜವಾಗಿ ಹಲವು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಹೆಚ್ಚಿನ ಬೇಡಿಕೆ ಉಂಟಾಗುತ್ತಿರುವುದನ್ನು ಗಮನಿಸಿ 2016-17ನೇ ಶೈಕ್ಷಣಿಕ ಸಾಲಿಗೆ ಮಾತ್ರ ಅನ್ವಯಿಸಿ ಪ್ರತಿ ಕಾಲೇಜಿನ ಮುಂದೆ ನಮೂದಿಸಿರುವ ಸಂಯೋಜನೆ ಮತ್ತು ವಿಭಾಗಗಳಲ್ಲಿ ಹೆಚ್ಚುವರಿಯಾಗಿ ಗರಿಷ್ಠ 20 (ಇಪ್ಪತ್ತು) ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅನುಮತಿ ನೀಡಲಾಗಿದೆ.

| ಕ್ರಸ | ಕಾಲೇಜಿನ ಸಂಕೇತ ಸಂಖ್ಯೆ | ಕಾಲೇಜಿನ ಹೆಸರು ಮತ್ತು ವಿಳಾಸ | ಸಂಯೋಜನೆ ಮತ್ತು ವಿಷಯ ಸಂಕೇತ ಸಂಖ್ಯೆಗಳು |
|---|---|---|---|
| 01 | SS-045 | ಶ್ರೀ ಸುಬ್ರಹ್ಮಣ್ಯೇಶ್ವರ ಪದವಿ ಪೂರ್ವ ಕಾಲೇಜು, ಸುಬ್ರಹ್ಮಣ್ಯ, ಸುಳ್ಯ ತಾಲೂಕು, ದ.ಕ | PCMB-33,34,35,36 |
| | | | SEBA-31,22,27,30 |
| | | | CEBA-41,22,27,30 |
| 02 | AN-178 | ಆದರ್ಶ ಪದವಿ ಪೂರ್ವ ಕಾಲೇಜು, ನಂ:3, 12ನೇ ಅಡ್ಡ ರಸ್ತೆ, 1ನೇ ಬ್ಲಾಕ್ ಆರ್.ಟಿ ನಗರ, ಬೆಂಗಳೂರು | CEBA-41,22,27,30 |
| | | | HEBA-21,22,27,30 |
| 03 | TT-111 | ಶ್ರೀ ವಿನಾಯಕ ಸ್ವತಂತ್ರ ಪದವಿ ಪೂರ್ವ ಕಾಲೇಜು, ಬೈಪಾಸ್ ರಸತೆ, ಶಿವಮೊಗ್ಗ ಜಿಲ್ಲೆ | HEBA-21,22,27,30 |
| 04 | AS-155 | ಆದರ್ಶ ವಿದ್ಯಾಲಯ ಪದವಿ ಪೂರ್ವ ಕಾಲೇಜು, ನಂ:75, ದೇವಂತಚಾರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು | SEBA-31,22,27,30 |

....2

| | | | |
|---|---|---|---|
| 05 | SS-201 | ಸ್ಯೆಂಟ್ ಜೋಕಿಮ್ಸ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಡಬ, ಪುತ್ತೂರು ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ | EBAC-22,27,30,41 |
| 06 | EE-269 | ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು, ಅಲಮೇಲು, ಸಿಂದಗಿ ತಾ॥, ಬಿಜಾಪುರ ಜಿಲ್ಲೆ | HSPEd-21,28,29,52 |
| 07 | SU-055 | ವಿವೇಕ ಪದವಿ ಪೂರ್ವ ಕಾಲೇಜು, ಕೋಟ, ಉಡುಪಿ ತಾ॥, ಉಡುಪಿ ಜಿಲ್ಲೆ | PCMCs-33,34,35,41<br>PCMS-33,34,35,31<br>PCME-33,34,35,40<br>SEBA-31,22,27,30<br>EBAC-22,27,30,41 |
| 08 | AN-378 | ಜಿಂದಾಲ್ ಪದವಿ ಪೂರ್ವ ಕಾಲೇಜು, ಜಿಂದಾಲ್‌ನಗರ, ತುಮಕೂರು ರಸ್ತೆ, ಬೆಂಗಳೂರು | PCMB-33,34,35,36<br>PCMCs-33,34,35,41<br>SEBA-31,22,27,30<br>EBAC-22,27,30,41 |
| 09 | LL-182 | ಮಾಸ್ಟರ್ಸ್ ಪದವಿ ಪೂರ್ವ ಕಾಲೇಜು, ಹೊಯ್ಸಳನಗರ, ಹಾಸನ ಜಿಲ್ಲೆ | PCMB-33,34,35,36 |
| 10 | AN671 | ಕರ್ನಾಟಕ ಸಂಯುಕ್ತ ಪದವಿ ಪೂರ್ವ ಕಾಲೇಜು, ನಂ:33/2, ತಿರುಮೇನಹಳ್ಳಿ, ಹೆಗ್ಗಡೆನಗರ ಮುಖ್ಯ ರಸ್ತೆ, ಯಲಹಂಕ, ಬೆಂಗಳೂರು, | EBAC-22,27,30,41 |
| 11 | SS-029 | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪದವಿ ಪೂರ್ವ ಕಾಲೇಜು, ಉಜಿರೆ, ದಕ್ಷಿಣ ಕನ್ನಡ ಜಿಲ್ಲೆ | PCMB-33,34,35,36<br>PCMCs-33,34,35,41<br>PCMS-33,34,35,31<br>HEPK-16,21,22,29<br>BAES-22,27,30,31<br>BAECs-22,27,30,41 |
| 12 | AS-031 | ವಿಜಯ ಪದವಿ ಪೂರ್ವ ಕಾಲೇಜು, 4ನೇ ಬ್ಲಾಕ್, ಜಯನಗರ, ಬೆಂಗಳೂರು | BASC-27,30,31,41 |
| 13 | AN-354 | ರೇವಾ ಸ್ವತಂತ್ರ ಪದವಿ ಪೂರ್ವ ಕಾಲೇಜು, ಸಿ.ಬಿ.ಐ ಹತ್ತಿರ, ಲಕ್ಷ್ಮಯ್ಯ ಬ್ಲಾಕ, ಗಂಗಾನಗರ ಬೆಂಗಳೂರು | EBAC-22,27,30,41 |
| 14 | AS-029 | ವಿಜಯ ಪದವಿ ಪೂರ್ವ ಕಾಲೇಜು, ಆರ್.ವಿ ರಸ್ತೆ, ಬಸವನಗುಡಿ, ಬೆಂಗಳೂರು | PCMB-33,34,35,36<br>PCMCs-33,34,35,41<br>PCME-33,34,35,40<br>EGBA-22,24,27,30<br>BASM-27,30,31,75 |
| 15 | AS-904 | ದಿ ಕಿಂಗ್ಡಮ್ ಪದವಿ ಪೂರ್ವ ಕಾಲೇಜು, ಕಾಲಾಬೇಟು, #1008, ಭಂಡಿ ಪ್ಲಾಜಾ ಐಡಿಯಲ್ ಹೋಮ್ಸ್ ಟೌನ್‌ಷಿಪ್, ಜಯಣ್ಣ ವೃತ್ತ, ಹೆಂಚೇನಹಳ್ಳಿ, ರಾಜಾಜೇಶ್ವರಿನಗರ, ಬೆಂಗಳೂರು | EBAC-22,27,30,41<br>PCMB-33,34,35,36<br>PCMCs-33,34,35,41 |
| 16 | JG-021 | ಜೆ.ಎ ಸಂಯುಕ್ತ ಪದವಿ ಪೂರ್ವ ಕಾಲೇಜು, ಮುಂಡರಗಿ, ಗದಗ ಜಿಲ್ಲೆ | PCMB-33,34,35,36 |
| 17 | PP-047 | ಓಂ ಶ್ರೀನಿಕೇತನ ಪದವಿ ಪೂರ್ವ ಕಾಲೇಜು, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ | HEGP-21,22,24,29<br>HEBA-21,22,27,30<br>PCMB-33,34,35,36 |
| 18 | SS-171 | ಸಂತ ಸೆಬೆಸ್ತಿಯನ್ನರ ಸಂಯುಕ್ತ ಪದವಿ ಪೂರ್ವ ಕಾಲೇಜು, ಉಳ್ಳಾಲ ಪೆರ್ಮನ್ನೂರು, ದ.ಕ ಜಿಲ್ಲೆ | HEBA-21,22,27,30<br>EBAC-22,27,30,41 |

....3

| | | | |
|---|---|---|---|
| 19 | MC-247 | ಶ್ರೀ ವಿಜೇತ ಪದವಿ ಪೂರ್ವ ಕಾಲೇಜು, ಶ್ರೀನಿವಾಸಪುರ–ಕೋಲಾರ ರಸ್ತೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ | PCMB-33,34,35,36 |
| 20 | AS-190 | ಸರ್ದಾರ್ ವಲ್ಲಭಾಬಾಯಿ ಪಟೇಲ್ ಪದವಿ ಪೂರ್ವ ಕಾಲೇಜು, ಸರ್ಜಾಪುರ, ಆನೇಕಲ್ ತಾ॥ ಬೆಂಗಳೂರು ದಕ್ಷಿಣ ಜಿಲ್ಲೆ | GEBA-24,22,27,30 |
| 21 | KK-008 | ಶ್ರೀಮತಿ ವ.ಜಿ ಮಹಿಳಾ ಪದವಿ ಪೂರ್ವ ಕಾಲೇಜು, ಕಲಬುರ್ಗಿ ಜಿಲ್ಲೆ | EBAC-22,27,30,41<br>PCMB-33,34,35,36 |
| 22 | KK-302 | ಶಾಹೀನ್ ಸ್ವತಂತ್ರ ಪದವಿ ಪೂರ್ವ ಕಾಲೇಜು, #10/5, ಬಡೆಪೂರ, ಕೆಹಿಚ್‌ಬಿ ಕಾಲೋನಿ, ಗುಲಬರ್ಗಾ ಜಿಲ್ಲೆ | PCMB-33,34,35,36 |
| 23 | DD-023 | ಕೆ.ಎನ್.ವಿ.ವಿ.ಎಸ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಿತ್ತೂರ, ಬೈಲಹೊಂಗಲ ತಾ॥, ಬೆಳಗಾಂವ ಜಿಲ್ಲೆ, | Opt.kHEHs-16,21,22,26<br>Opt.kHPEd-16,21,29,52<br>EPBA-22,29,27,30 |
| 24 | QQ-020 | ಎಂ.ಜಿ.ಸಿ ಪದವಿ ಪೂರ್ವ ಕಾಲೇಜು, ಸಿದ್ದಾಪುರ, ಉ.ಕ ಜಿಲ್ಲೆ, | EBAC-22,27,30,41<br>EBAS-22,27,30, 31 |
| 25 | KY-072 | ಶ್ರೀ ಚರಬಸವೇಶ್ವರ ಮಹಿಳಾ ಪದವಿ ಪೂರ್ವ ಕಾಲೇಜು, ಶಹಾಪೂರ, ಯಾದಗಿರಿ ಜಿಲ್ಲೆ, | HEPS-21,22,28,29 |

ಷರತ್ತುಗಳು:

1. ಈ ಅನುಮತಿಯು 2016–17ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.
2. ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಪೂರ್ವಾನುಮತಿ ಇಲ್ಲದೆ 80 ವಿದ್ಯಾರ್ಥಿಗಳಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಬಾರದು.
3. ಹೆಚ್ಚುವರಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವ ಶುಲ್ಕಗಳನ್ನು ಮಾತ್ರ ಪ'ಡೆಯತಕ್ಕದ್ದು.
4. ಹಾಲಿ ಅನುಮತಿಸಿರುವ ಹೆಚ್ಚುವರಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಇಲಾಖೆಯಿಂದ ಬೋಧಿಸಲು ಮಂಜೂರಾತಿ ನೀಡಿರುವ ಭಾಷಾ ವಿಷಯ, ಐಚ್ಛಿಕ ವಿಷಯ ಮತ್ತು ಸಂಯೋಜನೆಗಳಿಗೆ ಮಾತ್ರ ಹಾಗೂ ವಿಭಾಗಗಳಿಗೆ ಮಾತ್ರ ಅನ್ವಯಿಸುವುದು. ಇಲಾಖೆಯಿಂದ ಬೋಧಿಸಲು ಮಂಜೂರಾತಿ ಪಡೆಯದೇ ಇರುವ ಭಾಷಾ ವಿಷಯ, ಸಂಯೋಜನೆಗಳಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಹೆಚ್ಚುವರಿ ವಿದ್ಯಾರ್ಥಿಗಳ ಬೋಧನೆಯನ್ನು ಹಾಲಿ ನೇಮಕ ಮಾಡಿಕೊಂಡಿರುವ ಉಪನ್ಯಾಸಕರಿಂದಲೇ ಬೋಧಿಸತಕ್ಕದ್ದು. ಹೆಚ್ಚುವರಿ ಉಪನ್ಯಾಸಕರ ನೇಮಕಾತಿಗೆ ಅವಕಾಶವಿರುವುದಿಲ್ಲ.
6. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿಯಿಂದ ಯಾವುದೇ ರೀತಿಯಲ್ಲಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡತಕ್ಕದ್ದಲ್ಲ.
7. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿರುವುದರಿಂದ ಸಮೀಪದ ಅಥವಾ ನೆರೆಹೊರೆಯ ಇತರೆ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆ ಉಂಟಾಗಬಾರದು ಮತ್ತು ಅನಾರೋಗ್ಯಕರ ಸ್ಪರ್ದೆ ಉಂಟಾಗಬಾರದು.
8. ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳುವ ಮುನ್ನ ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮ 4ಕ್ಕೆ ಅನುಗುಣವಾಗಿ ಸದರಿ ವಿದ್ಯಾರ್ಥಿಗಳಿಗೆ ಅಗತ್ಯ/ಮೂಲಭೂತ ಸೌಲಭ್ಯಗಳು ಇರುವುದನ್ನು ಅಥವಾ ಹೊಂದಿಸಿಕೊಂಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಹೆಚ್ಚುವರಿ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
9. ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ವಿಸ್ತೀರ್ಣ ಮತ್ತು ಸಂಖ್ಯೆ ಸರಿ ಹೊಂದಿದಲ್ಲಿ ಮಾತ್ರ ವಿದ್ಯಾರ್ಥಿಗಳ ದಾಖಲಾತಿ ಮಾಡಿಕೊಳ್ಳತಕ್ಕದ್ದು.
10. ಹೆಚ್ಚುವರಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡ ಬಗ್ಗೆ ಪ್ರತಿಯೊಂದು ಸಂಯೋಜನೆ ಮತ್ತು ವಿಭಾಗಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರ ಮೂಲಕ ಈ ಕಛೇರಿಗೆ ಸಲ್ಲಿಸತಕ್ಕದ್ದು.
11. ಈ ಹೆಚ್ಚುವರಿ ವಿಭಾಗಗಳ ದಾಖಲಾತಿಯು ಹೆಚ್ಚುವರಿ ಸಂಯೋಜನೆ ಅಥವಾ ಹೆಚ್ಚುವರಿ ವಿಭಾಗದ ಮಂಜೂರತಿ ಎಂದು ಪರಿಗಣಿಸತಕ್ಕದ್ದಲ್ಲ.
12. ಹೆಚ್ಚುವರಿ ವಿಷಯ/ಸಂಯೋಜನೆ ಮಂಜೂರಾತಿಯಿಂದ ಯಾವುದೇ ರೀತಿಯ ಅನಾರೋಗ್ಯಕರ ಸ್ಪರ್ಧೆ ಉಂಟಾಗಬಾರದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಸುತ್ತಮುತ್ತಲಿನ ಕಾಲೇಜುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ದಕ್ಕೆ ಉಂಟಾಗಬಾರದು ಮತ್ತು ಈ ಬಗ್ಗೆ ಹೆಚ್ಚುವರಿ ವಿಭಾಗಗಳ ಸಂಬಂಧದಲ್ಲಿ ನೆರೆಹೊರೆಯ ಕಾಲೇಜುಗಳಿಂದ ಅಥವಾ ಪೋಷಕರಿಂದ ಆಕ್ಷೇಪಣೆಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು,

1. ಸಂಭಂದಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮಾಹಿತಿಗಾಗಿ
2. ಸಂಭಂದಪಟ್ಟ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಕಛೇರಿ ಪ್ರತಿ.